ಸಿಸಿ ಸಂಖ್ಯೆ: 756/2022
ಡಿಡಬ್ಲ್ಯೂ: 01
ದಿನಾಂಕ: 10.08.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು: ದೂರುದಾರರ ಪರ ಶ್ರೀಮತಿ ಡಿ ಬಿ ಸಿ ರವರಿಂದ.**

ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ಮಾಹಿತಿ ನಾನೇ ಕೊಟ್ಟಿದ್ದೇನೆ. ಸಾಕ್ಷಿಗೆ ಆತನ ವಕಾಲತ್ತು ನಾಮಾ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರ ತೋರಿಸಿ ಸಹಿ ಗುರುತಿಸಲು ಕೇಳಿದಾಗ ಸದರಿ ಸಹಿ ತನ್ನದೇ ಅಂತಾ ಒಪ್ಪಿಕೊಂಡಿರುತ್ತಾರೆ. ಅದರಂತೆ ನಿಪಿ-1 ಚೆಕ್ ತೋರಿಸಿ ಅದರಲ್ಲಿರುವ ಸಹಿ ಯಾರದು ಅಂತಾ ಕೇಳಿದಾಗ ಸದರಿ ಸಹಿ ತನ್ನದಲ್ಲ ಅಂತಾ ನಿರಾಕರಿಸಿರುತ್ತಾರೆ. ಎರಡು ಸಹಿಗಳು ನನ್ನದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಆತನಿಗೆ ಚೆಕ್ ಕೊಟ್ಟೆ ಇಲ್ಲ ಅಂತಾ ನುಡಿಯುತ್ತಾರೆ. ಬಶೆಟ್ಟೆಪ್ಪ ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಆದರೆ ಇದನ್ನೆಲ್ಲ ಅವರ ಮಗ ಷಣ್ಮುಖಗೌಡ ಮಾಡಿರುತ್ತಾನೆ. ನನ್ನ ಮಾವನ ಕಡೆಯಿಂದ ಜೋರು ಮಾಡಿ ಈ ಪ್ರಕರಣ ಷಣ್ಮುಖಗೌಡ ಮಾಡಿಸಿರುತ್ತಾನೆ. ನಾನು ಅವರ ತಂದೆ ಹತ್ತಿರ ಹಣ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಫ್ಯಾಕ್ಟರಿಯಲ್ಲಿ ಷಣ್ಮುಖಗೌಡನಿಗೆ ಮ್ಯಾನೇಜರ್ ಪೋಸ್ಟ ಕೊಟ್ಟಿದ್ದೆ. ಆ ಕುರಿತು ದಾಖಲೆ ಹಾಜರುಪಡಿಸಿದ್ದೇನೆ. ಆ ದಾಖಲೆಗೂ ಷಣ್ಮುಖಗೌಡನಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಷಣ್ಮುಖಗೌಡನಿಗೆ ಮ್ಯಾನೇಜರ್ ಪೋಸ್ಟಗೆ 20 ಸಾವಿರ ಸಂಬಳ ಕೊಡುತ್ತಿದ್ದೆ. ಸಾಕ್ಷಿ ಸ್ವತಃ ಮೊದಲು ಆತ ಬಂದಾಗ 8 ಸಾವಿರ ಕೊಡುತ್ತಿದ್ದೆ ನಂತರ ಪ್ರತಿ ವರ್ಷ ಹೆಚ್ಚು ಮಾಡುತ್ತಾ ಕೊನೆಗೆ 20 ಸಾವಿರ ರೂಪಾಯಿ ಸಂಬಳ ಕೊಟ್ಟಿದ್ದೇನೆ ಅಂತಾ ನುಡಿಯುತ್ತಾರೆ. ನನ್ನ ಫ್ಯಾಕ್ಟರಿಯಲ್ಲಿ 40-50 ಜನ ದುಡಿಯುತ್ತಿದ್ದರು, ಎಲ್ಲರಂತೆ ಷಣ್ಮುಖಗೌಡನಿಗೂ ಸಹ ಸಂಬಳ ಪ್ರತಿ ವರ್ಷ ಹೆಚ್ಚಿಗೆ ಕೊಡುತ್ತಿದ್ದೆ. ಸಂಬಳ ಕೊಡುತ್ತಿದ್ದ ಕುರಿತು ರಿಜಿಸ್ಟರ ಇಟ್ಟಿದ್ದೆವು. ಸದರಿ ರಿಜಿಸ್ಟರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಬ್ಯಾಂಕನವರು ಫ್ಯಾಕ್ಟರಿ ಸೀಜ್ ಮಾಡಿದ್ದರಿಂದ ಎಲ್ಲವೂ ಅಲ್ಲಿಯೇ ಇರುತ್ತವೆ, ಅವುಗಳನ್ನು ಹಾಜರುಪಡಿಸಲು ಆಗಿಲ್ಲ. ಫ್ಯಾಕ್ಟರಿ ಸೀಜ್ ಆಗಿರುತ್ತದೆ ಯಾವುದೇ ದಾಖಲೆಗಳು ನನ್ನ ಹತ್ತಿರ ಇಲ್ಲ ಫ್ಯಾಕ್ಟರಿಯಲ್ಲಿರುತ್ತವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರ ಷಣ್ಮುಖಗೌಡ ನನ್ನ ಫ್ಯಾಕ್ಟರಿಯಲ್ಲಿ ಕಸ ಸಹ ಗೂಡಿಸಿದ್ದಾನೆ. ದಿನಾಂಕ: 13.09.2019 ರಂದು 10 ಲಕ್ಷ ರೂಪಾಯಿ ನಮೂದು ಮಾಡಿ ಬಶೆಟ್ಟೆಪ್ಪಗೌಡನಿಗೆ ನಿಪಿ-1 ಚೆಕ್ ನೀಡಿದ್ದೇನೆ ಎಂದರೆ ಸರಿಯಲ್ಲ. ಆದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ

ಮಾವನ ಕಡೆಯಿಂದ ಹಣ ತೆಗೆದುಕೊಳ್ಳುವುದು ಕೊಡುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. 10 ಲಕ್ಷ ಮರಳಿ ಕೊಡಲು ನಿಪಿ-1 ಚೆಕ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪಿರ್ಯಾದಿದಾರರ ಮಧ್ಯ ಅಸಲು ದಾವಾ ಇರುತ್ತದೆ ಅಂತಾ ಹೇಳಿದು ಅದರ ನಂಬರು ಹೇಳಲು ಬರುವುದಿಲ್ಲ ಆದರೆ ನನ್ನ ಹೆಂಡತಿ ಕಡೆಯಿಂದ ನನ್ನ ಆಸ್ತಿಯನ್ನು ನನ್ನ ಮಾವ ತನ್ನ ಹೆಸರಿಗೆ ಭಕ್ಷಿಸ ಅಂತಾ ಮಾಡಿಕೊಂಡಿರುತ್ತಾರೆ ಆ ಕುರಿತು ಕೇಸು ಹಾಕಿದ್ದೇನೆ. ನಾನು ಕೊಟ್ಟ ಚೆಕ್ಕನ್ನು ಅವರು ನಗದಿಗಾಗಿ ಹಾಕಿದಾಗ ನನ್ನ ಖಾತೆಯಲ್ಲಿ ಹಣ ಇಲ್ಲ ಅಂತಾ ಮರಳಿ ಬಂದಿರುತ್ತದೆ ಎಂದರೆ ಸರಿಯಲ್ಲ ನಾನು ಚೆಕ್ ಕೊಟ್ಟಿಲ್ಲ. ನಂತರ ಮತ್ತೊಮ್ಮೆ ಚೆಕ್ ಹಾಜರು ಮಾಡಿರುತ್ತಾರೆ ಆಗಲೂ ಸಹ ಹಣ ಇರಲಿಲ್ಲ ಎಂದರೆ ಸರಿಯಲ್ಲ. ಚೆಕ್ಕಿನ ಹಣ ಕೊಡಬೇಕಾಗುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ಕಳ್ಳತನದ ಕುರಿತು ದೂರು ನೀಡಿದಾಗ ನನ್ನ ಮಾವ ಮತ್ತು ಷಣ್ಮುಖಗೌಡ ಪೋಲಿಸ್ ಠಾಣೆಗೆ ಬಂದಿದ್ದರು ಅಲ್ಲಿ ರಾಜೀಯಾಗಿ ಹೋಗಿರುತ್ತಾರೆ ಆ ಕುರಿತು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಅದು ಪೋಲಿಸ್ ಠಾಣೆಯಲ್ಲಿಯೇ ಮುಗಿದಿರುತ್ತದೆ ಆದ್ದರಿಂದ ಯಾವುದೇ ದಾಖಲೆ ಇರುವುದಿಲ್ಲ. ನಿಪಿ-1 ಚೆಕ್ ನಂಬರು ಹಾಕಿ ದೂರು ನೀಡಿದ್ದೀರಾ ಎಂದರೆ ಅದು ನನ್ನ ವಯಕ್ತಿಕ ಎಸ್ ಬಿ ಖಾತೆಯ ಚೆಕ್ ಆಗಿದ್ದು ಅದನ್ನು ಕಳ್ಳತನ ಮಾಡಿರುವುದು ಗೊತ್ತಾಗಿಲ್ಲ ಆದ್ದರಿಂದ ದೂರು ಕೊಟ್ಟಿಲ್ಲ. ಬ್ಯಾಂಕನವರು ಚೆಕ್ ನಗದೀಗಾಗಿ ಕೊಟ್ಟಾಗ ಮೊದಲು ಸಹಿ ಪರಿಶೀಲನೆ ಮಾಡುತ್ತಾರೆ ಎಂದರೆ ನನ್ನ ಅಳಿಯ ಪರ್ಫೆಕ್ಟ ಆಗಿ ಪೋರ್ಜರಿ ಸಹಿ ಮಾಡುತ್ತಾನೆ. ನಿಡಿ-1 ಪುಸ್ತಕದಲ್ಲಿರುವ ಸಹಿಗಳು ಷಣ್ಮುಖಗೌಡನದೇ ಇರುತ್ತವೆ. ಸದರಿ ಪುಸ್ತಕ 2013 ರಿಂದ 2016 ರವರೆಗಿನ ಪುಸ್ತಕ ಇರುತ್ತದೆ. ಅವನ ಸಹಿ ನಾನೇ ಮಾಡಿಕೊಂಡು ನಾನೇ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಚೆಕ್ ನಂ.357465 ಚೆಕ್ಕನ್ನು ವಿಜಯಕುಮಾರ ಬಾಬಣ್ಣ ಇವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ ಅದನ್ನು ಸಹ ನನ್ನ ಅಳಿಯ ಹಾಕಿಸಿದ್ದ. ಎಲ್ಲವನ್ನು ನನ್ನ ಅಳಿಯ ಹಾಕಿಸಿದ್ದ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯಕುಮಾರನಿಗೆ ಯಾವ ಬ್ಯಾಂಕನ ಚೆಕ್ ಕೊಟ್ಟಿದ್ದೀರಿ ಎಂದರೆ ಎಲ್ಲಾ ಚೆಕ್ ಗಳನ್ನು ಷಣ್ಮುಖನೇ ತೆಗೆದುಕೊಂಡು ಹೋಗಿರುತ್ತಾನೆ. ನಾನು ಆದಾಯ ತೆರಿಗೆ ತುಂಬುತ್ತಿದ್ದೆ. ದೂರುದಾರನ ಕಡೆಯಿಂದ ಹಣ ಪಡೆದುಕೊಂಡು ಚೆಕ್ ನೀಡಿದ್ದರೂ ಸಹ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.